## ನನ್ನ ಓದು

ಹಿಂತಿರುಗಿದೆ. ಆದರೆ ಗಂಡ ನನ್ನಿಂದ ದೂರವಾದ. ಕಾರಣ ಹಾಸಿಗೆಯಲ್ಲಿ ಆತನ ಇಚ್ಛೆಗೆ ತಕ್ಕಂತೆ ನಾನು ಸ್ಪಂದಿಸುತ್ತಿಲ್ಲವಂತೆ. ಆತ ಬಿಟ್ಟುಹೋದ ಮೇಲೆ ನಾನು ನಿರಂತರವಾಗಿ ದುಡಿದೆ. ನನ್ನ ಮಕ್ಕಳಿಗೆ ಒಳ್ಳೆಯ ಜೀವನ ಕಲ್ಪಿಸಿದೆ" ಎಂದು ಉತ್ತರಿಸಿದಳು. ಇದನ್ನೆಲ್ಲ ಹೇಳಿದ ಮೇಲೆ ಆಕೆ ಮೌನಕ್ಕೆ ಜಾರಿದಳು. ಈ ಮೌನದಲ್ಲಿ ಏನಿರಬಹುದು? ಇದನ್ನು ಯಾವುದೇ ಮನುಷ್ಯ ಭಾಷೆಯು ವಿವರಿಸಲು ಇನ್ನು ಎಷ್ಟು ಲಕ್ಷ ವರ್ಷಗಳು ಬೇಕೋ? ಒಬ್ಬ ಓದುಗ, ಬರಹಗಾರನಾದ ನನಗೆ ಈ ಮೌನವು ಭಾಷೆಯ ನಿರರ್ಥಕತೆಯನ್ನು ಮನದಟ್ಟು ಮಾಡಿಕೊಟ್ಟಿದೆ. ನನಗೆ ಯಾವಾಗಲೂ ಕಾಡುವ ವಿಷಯವೆಂದರೆ – ಮನುಷ್ಯರ ಕ್ರೌರ್ಯ, ಹಿಂಸೆ, ನೋವು, ಇವುಗಳು ಬೆಳೆದ ಗತಿಯಲ್ಲಿ ಮನುಷ್ಯ ಭಾಷೆಗಳು ಏಕೆ ಬೆಳೆದಿಲ್ಲ? ಕೊನೆಗೂ ಮೌನಕ್ಕೆ ಜಾರುವುದೇ ನಮ್ಮ ವಿಧಿಯೆ ಇರಲಿ, ಇದು ವೈಯಕ್ತಿಕ.

**ಇನ್ನೊಂದು ವಿವರಣೆ ಹೀಗಿದೆ:** 1992ರಲ್ಲಿ ಫೋಕಾ ಎಂಬ ಶಾಲೆಯಲ್ಲಿ ಓದುತ್ತಿದ್ದ ಹುಡುಗಿ ತನ್ನ ಅನುಭವ ಹಂಚಿಕೊಂಡಳು.ಜೊರೋನಾವುಕೋವಿಚ್‌ಎಂಬವ್ಯಕ್ತಿ ಇವಳೊಂದಿಗೆ ಬಲವಂತದ ಲೈಂಗಿಕ ಕ್ರಿಯೆಗೆ ತೊಡಗಿದ. ಏನೂ ಆಗಿಲ್ಲವೆಂಬಂತೆ ಸುಮ್ಮನೆ ಹೊರಟುಹೋದ. ಯಾರೂ ಇದನ್ನು ಗಂಭೀರವಾಗಿ ಸ್ವೀಕರಿಸಲಿಲ್ಲ. ಇದಕ್ಕೆಲ್ಲ ಸಾರ್ವಜನಿಕರಿಂದ ಒಂಥರದ ಅಸಹಾಯಕ ಮನ್ನಣೆ ಸಿಕ್ಕಿತ್ತು. ಶಾಲೆಯಲ್ಲಿ ಸೈನ್ಯದ ಒಂದು ಗುಂಪು ನುಗ್ಗಿತು. ಅಲ್ಲಿನ ಎಂಟು ಹುಡುಗಿಯರನ್ನು ಆಯ್ಕೆ ಮಾಡಿ ನೆಲದ ಮೇಲೆ ಬೆತ್ತಲೆ ಮಲಗುವಂತೆ ಮಾಡಿತು. ಕ್ಲಾಸಿನ ಉಳಿದ ಹುಡುಗಿಯರೆದುರು ಈ ಎಂಟು ಜನರ ಮೇಲೆ ಅತ್ಯಾಚಾರ ಮಾಡಲಾಯಿತು. ಸೈನಿಕರು ಬೋಸ್ನಿಯಾದ ಒಂದು ಕೋಮಿಗೆ ಸೇರಿದ ಹುಡುಗಿಯರನ್ನು ಆಯ್ಕೆ ಮಾಡಿಕೊಂಡರು... ಇನ್ನೊಂದು ಧರ್ಮಕ್ಕೆ ಅವಮಾನ ಮಾಡುವುದಕ್ಕಾಗಿ ಇಂಥ ಕ್ರೂರ ಮಾರ್ಗವನ್ನು ಅವರು ಆಯ್ಕೆ ಮಾಡಿಕೊಂಡಿದ್ದರು. ಧರ್ಮ, ಸಮಾಜ ಮತ್ತು ಸಮುದಾಯದ ಮೇಲಿನ ಸೇಡಿಗೆ ಅಮಾಯಕ ಬಾಲಕಿಯರು ಬಲಿಯಾದರು.

ಈ ಕೃತಿ ಎತ್ತುವ ಪ್ರಶ್ನೆಯೆಂದರೆ ಯುದ್ಧ ಕಾಲದಲ್ಲಿ 'ದೇಹವೇ ದೇಶ' ಯಾಕಾಗುತ್ತದೆ? ಇನ್ನೊಂದು ದೇಶ, ಸಮುದಾಯದ ಹೆಣ್ಣಿನ ದೇಹವೇ ಏಕೆ ಶತ್ರು ದೇಶವಾಗುತ್ತದೆ? ಅವಳ ಅಂಗಗಳನ್ನು ಹಿಂಸಿಸುವುದೇ ವಿಜಯೋತ್ಸವ ಏಕೆ ಆಗುತ್ತದೆ? ನನ್ನ ವೈಯಕ್ತಿಕ ಅಂದಾಜಿನ ಪ್ರಕಾರ ಎಲ್ಲಾ ದೇಶದ ಸೈನಿಕರು ಸರಾಸರಿಯಾಗಿ ಶೇ. 40 ಶತ್ರುದೇಶದ ಮೇಲೆ ಯುದ್ಧಮಾಡುತ್ತಾರೆ. ಶೇ. 60 ಆ ದೇಶದ ಮಹಿಳೆಯರ ದೇಹದ ಮೇಲೆ ಯುದ್ಧಮಾಡುತ್ತಾರೆ. ಇದನ್ನು ಮರೆಮಾಚಲು 'ಸೈನಿಕರೆಂದರೆ ದೇಶ ರಕ್ಷಕರು' ಎನ್ನುವ ಪುರಾಣಗಳನ್ನು ಎಲ್ಲಾ ದೇಶಗಳು ಕಟ್ಟಿಕೊಂಡಿವೆ. ಹೌದು, ಅವರು ದೇಶ ರಕ್ಷಕರು. ಜನರಿಗಾಗಿ ತಮ್ಮ ಜೀವ ಬಲಿ ಕೊಡುವರು. ಆದರೆ, ರಾಷ್ಟ್ರ ಹಾಗೂ ಧರ್ಮಗಳೆನ್ನುವ ಪಶುಬಲದ ಆರಾಧನೆಗಾಗಿ ಮಹಿಳೆಯರನ್ನು ನಾಶವೂ ಮಾಡುತ್ತಾರೆ.

ಗರಿಮಾ ಜೊತೆ ಮಾತನಾಡಿದ ಮಹಿಳೆಯರು ಅವರಿಗೂ ಪ್ರಾಯಶಃ ಅರ್ಥವಾಗದ ಜೀವಕ್ಕೆ ಅಂಟಿಕೊಳ್ಳುವ ರಹಸ್ಯ ಪ್ರವೃತ್ತಿಯಿಂದಾಗಿ ಮತ್ತೆ ಬದುಕನ್ನು ಕಟ್ಟಿಕೊಂಡರು. ಆದರೆ ಸೆರ್ಬಿಯಾ ನಿರ್ಮಿಸಿದ ಯಾತನಾ ಶಿಬಿರದ ನರಕಗಳಿಂದ ಉಳಿದು ಬಂದು ಎಷ್ಟು ಸಾವಿರ ಮಹಿಳೆಯರು ಏನಾದರು? ಈ ಕೃತಿಯಲ್ಲಿ ಅನೇಕರು ಹೇಳುವ ಹಾಗೆ ಅವರು ವೇಶ್ಯಾವಾಟಿಕೆ ಸೇರಿ, ಕುಟುಂಬಗಳನ್ನು ನೋಡಿಕೊಂಡರು. ಅವರಲ್ಲಿ ಒಬ್ಬಳು ಹೇಳುತ್ತಾಳೆ:

"ಇದೆಲ್ಲ ನನ್ನ ಜೊತೆ ಯಾಕಾಯಿತು? ದೇವರಲ್ಲಿ ಮೊರೆಯಿಟ್ಟು ಕೇಳಿದೆ. ಇಲ್ಲ, ಯಾವ ಉತ್ತರವೂ ಸಿಗುತ್ತಿಲ್ಲ. ಯಾಕೆಂದರೆ ಅದು ಯುದ್ಧದ ಕಾಲ, ಯುದ್ಧ ಕಾಲದಲ್ಲಿ ದೇವರು ಮೂಕರಾಗಿಬಿಡುವರೇನೋ..."

ಖಿನ್ನತೆ, ಅಪರಾಧಿ ಭಾವ, ನಿದ್ರಾಹೀನತೆ, ಇವುಗಳಿಂದ ಬಳಲಿ ಸತ್ತವರ ಸಂಖ್ಯೆ ಎಷ್ಟೋ ಯಾರಿಗೂ ಗೊತ್ತಿಲ್ಲ. ಈ ಜಗತ್ತಿನಲ್ಲಿ ಅನಾಮಿಕ ದುಃಖಿಗಳನ್ನು ಎಣಿಸುವವರಾರು? ಅಂತಿಮ ನಿರಾಶ್ರಿತ ಮಹಿಳೆಯರ ಸಂಖ್ಯೆಯನ್ನು ಎಣಿಸುವ ಅಂಕಗಣಿತದಲ್ಲಿ ಜಗತ್ತಿನ ಎಲ್ಲಾ ದೇವರು ಫೇಲ್ ಆಗಿದ್ದಾರೆ ಅಲ್ಲವೆ?

ಸ್ವತಃ ಗರಿಮಾ ಒಂದು ನೋವು ತುಂಬಿದ ಪ್ರಶ್ನೆ ಕೇಳಿಕೊಳ್ಳುತ್ತಾರೆ. ಇದೆಲ್ಲಾ ಬರೆದು ಪ್ರಯೋಜನವೇನು? ಯುದ್ಧಗಳು ಯಾವಾಗಲೂ ನಡೆದಿವೆ. ಹಿಂಸೆಯ ಬಗ್ಗೆ ಸಾವಿರಾರು ಪುಟ ಬರೆಯಲಾಗಿದೆ. ಏನು ಪ್ರಯೋಜನವಾಗಿದೆ? ಯಾರು ಪಾಠ ಕಲಿತಿದ್ದಾರೆ? ಸರಳ ಉತ್ತರ ಯಾರೂ ಇಲ್ಲ. ಗರಿಮಾ ಅವರಿಗೆ ಯಾಕೆ ಬರೆಯುತ್ತೇನೆ ಎನ್ನುವುದಕ್ಕೆ ಸಿಕ್ಕುವ ಉತ್ತರವೆಂದರೆ,